ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಸಂಖ್ಯೆ: DOF-TECHOALL1/328/2022,E-881632,** **ದಿನಾಂಕ: 14/09/2022**

## ಸುತ್ತೋಲೆ

**ವಿಷಯ**: ಇ-ಟೆಂಡರ್ ಪ್ರಕ್ರಿಯೆಯ ಏಕ ಮಾತ್ರ ಟೆಂಡರ್ ಸ್ವೀಕೃತವಾದ ಪ್ರಕರಣಗಳನ್ನು ಪರಿಗಣಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಕೋರಿ.

**ಉಲ್ಲೇಖ:** ಮೀನುಗಾರಿಕೆ ಉಪ ನಿರ್ದೇಶಕರು, ತುಮಕೂರುರವರ ಪತ್ರ ಸಂಖ್ಯೆ: ಹಗುಪ/55/2022-23, ದಿನಾಂಕ: 13/09/2022.

*****************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಕೆರೆಗೆ ಒಂದೇ ಇ-ಟೆಂಡರ್ ಸಲ್ಲಿಕೆಯಾಗಿದ್ದಲ್ಲಿ ಅಂಗೀಕರಿಸುವ ಅಥವಾ ತಿರಸ್ಕರಿಸುವ – ಯಾವ ಕ್ರಮ ಅನುಸರಿಸಬೇಕು ಎಂಬ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ಪಸಂಮೀ/125/2013 ಬೆಂಗಳೂರು ದಿ.21/02/2014 ರ ಒಳನಾಡು ಗುತ್ತಿಗೆ ಕಾರ್ಯ ನೀತಿ, ಅನುಬಂಧ-5 ರಲ್ಲಿನ ಕ್ರ.ಸಂ.7 ರಲ್ಲಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿ ಸಂಬಂಧ ಸರ್ಕಾರಿ ಸವಾಲು ನಿಗದಿಪಡಿಸುವುದನ್ನು ಉಲ್ಲೇಖಿಸಲಾಗಿದೆ. ಮುಂದುವರೆದಂತೆ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇಗೊಳಿಸಲಿದ್ದು, ಬಿಡ್‌ದಾರರು ನಮೂದಿಸುವ ಮೊತ್ತವು ಸರ್ಕಾರಿ ಸವಾಲಿಗಿಂತ ಹೆಚ್ಚಿನ ಮೊತ್ತವಿದ್ದಲ್ಲಿ, H1 ದರ ನಮೂದಿಸಿರುವ ಬಿಡ್‌ದಾರರಿಗೆ ದೃಢೀಕರಣ ಆದೇಶ ನೀಡಲಾಗುತ್ತದೆ.

ಇ-ಟೆಂಡರ್ ಮೂಲಕ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕು ವಿಲೇವಾರಿ ಮಾಡುತ್ತಿರುವುದರಿಂದ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲಾಗಿರುತ್ತದೆ ಹಾಗೂ ಒಂದೇ ಇ-ಟೆಂಡರ್ ಸಲ್ಲಿಕೆಯಾಗಿದೆ ಎಂದು ತಿರಸ್ಕರಿಸಿದಲ್ಲಿ ಕಾಲಮಿತಿಯಲ್ಲಿ ಜಲಸಂಪನ್ಮೂಲಗಳು ವಿಲೇವಾರಿಯಾಗದೆ ಮೀನುಗಾರಿಕೆ ಚಟುವಟಿಕೆಗಳಿಗೆ ಹಿನ್ನಡೆಯಾಗುವುದಲ್ಲದೆ ಸರ್ಕಾರಕ್ಕೆ ಆರ್ಥಿಕ ಹೊರೆಯಾಗಲಿದೆ. ಆದುದರಿಂದ ಇ-ಟೆಂಡರ್‌ನಲ್ಲಿ ನಮೂದಿಸಿರುವ H1 ದರವು ಸರ್ಕಾರಿ ಸವಾಲಿಗಿಂತ ಹೆಚ್ಚಿನ ಮೊತ್ತವಿದ್ದಲ್ಲಿ ಒಂದೇ ಇ-ಟೆಂಡರ್ ಸಲ್ಲಿಕೆಯಾದರೂ ಸಹ ಮೀನುಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ಸದರಿ ಇ-ಟೆಂಡರ್ ಅನ್ನು ಅಂಗೀಕರಿಸಿ ಗುತ್ತಿಗೆ ಕಾರ್ಯನೀತಿ 2014 ರಂತೆ ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸೂಚಿಸಲಾಗಿದೆ.

ಸಹಿ/-
ಮೀನುಗಾರಿಕೆ ನಿರ್ದೇಶಕರು

ಗೆ,
ಪ್ರತಿ: ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು
ಪ್ರತಿ ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರು
ಪ್ರತಿ: ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರು
ಪ್ರತಿ: ಹಗುಪ ಸಂಗ್ರಾಹ ಕಡತ (1) ಮತ್ತು (2)ಕ್ಕೆ ಮಾಹಿತಿಗಾಗಿ.

15/9/2022

o/c 14/9/22

ಮೀನುಗಾರಿಕೆ ನಿರ್ದೇಶಕರ ಪರವಾಗಿ